1035 (1525) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಕಂದಾಯ ನಿವೇಶನಗಳಲ್ಲಿ ಮನೆಗಳನ್ನು / ಬಡಾವಣೆಗಳನ್ನು ನಿರ್ಮಿಸಿಕೊಂಡಿರುವ ಮತ್ತು ಕಂದಾಯ ಇಲಾಖೆಯ ಭೂಮಿಯನ್ನು ಒತ್ತುವರಿ / ಅತಿಕ್ರಮಿಸಿಕೊಂಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು?

ಇ) ಕಂದಾಯ ನಿವೇಶನಗಳಲ್ಲಿ ನಿರ್ಮಿಸಿಕೊಂಡಿರುವ ಮನೆಗಳು / ಬಡಾವಣೆಗಳನ್ನು ಸಕ್ರಮಗೊಳಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಈ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಕಂದಾಯ ಇಲಾಖೆಯ ಭೂಮಿಯನ್ನು ಒತ್ತುವರಿ/ಅತಿಕ್ರಮಿಸಿಕೊಂಡಿರುವುದನ್ನು ತೆರವುಗೊಳಿಸಿ ಈ ಭೂಮಿಯನ್ನು ಸರ್ಕಾರವು ತನ್ನ ವಶಕ್ಕೆ ತೆಗೆದುಕೊಳ್ಳಲು ಕೈಗೊಂಡ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಹೌದು.

ಆ) ಕರ್ನಾಟಕ ಭೂಕಂದಾಯ ತಿದ್ದುಪಡಿ ಕಾಯ್ದೆ 1964, ಕಲಂ 94(ಸಿ) ರಡಿಯಲ್ಲಿ ರಚಿಸಲಾದ ಕರ್ನಾಟಕ ಸ್ವಾಧೀನತೆಯಲ್ಲಿರುವ ಸರ್ಕಾರಿ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಭೂ ಮಂಜೂರಾತಿ ನಿಯಮಗಳ 1999ರ ನಿಯಮ (3) ರಡಿಯಲ್ಲಿ ಸರ್ಕಾರಿ ಜಮೀನುಗಳಲ್ಲಿ ಅಕ್ರಮವಾಗಿ ಮನೆಗಳನ್ನು ನಿರ್ಮಿಸಿಕೊಂಡಿರುವುದರಿಂದ ಅರ್ಜಿಗಳನ್ನು ಪಡೆದು ಸದರಿ ಜಮೀನುಗಳನ್ನು ಸಕ್ರಮಗೊಳಿಸಲು ಅವಕಾಶ ನೀಡಿರುತ್ತೆ.

ಇ) ಪರಿಶೀಲನೆಯಲ್ಲಿದೆ.

ಈ) ಈ ಒತ್ತುವರಿ ಅತಿಕ್ರಮಿಸಿಕೊಂಡಿರುವುದನ್ನು ತೆರವುಗೊಳಿಸಲು ಬೆಂಗಳೂರು ಮೆಟ್ರೋಪಾಲಿಟಿನ್ ಟಾಸ್ಕ್ ಫೋರ್ಸ್‌ನ ಕಾರ್ಯಪರಿಶೀಲನೆಗಾಗಿ ರಾಜ್ಯಮಟ್ಟದ ಚಾಲನಾ ಸಮಿತಿಯನ್ನು ರಚಿಸಲಾಗಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 128 ಭೂದಾಸ 2005, ದಿ: 22.8.05ರಂತೆ ಒತ್ತುವರಿಯಾಗಿರುವ ಸರ್ಕಾರಿ ಜಮೀನುಗಳನ್ನು ಗುರುತಿಸಿ ಸರ್ವೇಯರ್‌ನಿಂದ ಅಳತೆ ಮಾಡಿಸಿ ನಿಖರವಾದ ಒತ್ತುವರಿ ವಿಸ್ತೀರ್ಣದ ಬಗ್ಗೆ ಸ್ಕೆಚ್‌ಗಳೊಂದಿಗೆ ವರದಿ ಪಡೆದು ಸದರಿ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

1037 (1088) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಬಕಾರಿ ಇಲಾಖೆ ನಡೆಸುವ ಹರಾಜಿನಿಂದ ಬರುವ ಆದಾಯವೆಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) 2006–07ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ಬರುವ ಒಟ್ಟು ಆದಾಯವೆಷ್ಟು (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) 2006–07ನೇ ಸಾಲಿಗೆ ರಾಜ್ಯದ 176 ತಾಲ್ಲೂಕುಗಳ ಪೈಕಿ ಈವರೆಗೆ 160 ತಾಲ್ಲೂಕುಗಳ ಸಾರಾಯಿ ಗುತ್ತಿಗೆ ಹಕ್ಕನ್ನು ವಿಲೇವಾರಿ ಮಾಡಿದ್ದು, ಉಳಿದ 16 ತಾಲ್ಲೂಕುಗಳ ಮರು ವಿಲೇವಾರಿಗಾಗಿ ಕ್ರಮ ಕೈಗೊಂಡಿದೆ. ವಿಲೇವಾರಿ ಆಗಿರುವ 160 ತಾಲ್ಲೂಕುಗಳಿಂದ ರಾಜ್ಯಕ್ಕೆ ಮಾಸಿಕ ರೂ. 144.28 ಕೋಟಿಗಳ ಆದಾಯ ಬರುತ್ತದೆ.

ಜಿಲ್ಲಾವಾರು ವಿವರವನ್ನು ಅನುಬಂಧ–1ರಲ್ಲಿ ಒದಗಿಸಲಾಗುವುದು.

ಆ) 2006–07ನೇ ಸಾಲಿನ ಅಬಕಾರಿ ವರ್ಷಕ್ಕೆ ಸರ್ಕಾರವು ಅಬಕಾರಿ ಇಲಾಖೆಗೆ 4060.33 ಕೋಟಿ ರೂ.ಗಳ ಆದಾಯದ ಗುರಿ ನಿಗಧಿಪಡಿಸಿರುತ್ತದೆ.

ಜಿಲ್ಲಾವಾರು ವಿವರ ಅನುಬಂಧ–2ರಲ್ಲಿ ಒದಗಿಸಲಾಗಿದೆ.

ANNEXURE - 1

AUCTION RESULTS FOR 2006-07

(Rs. in Laksh)

Sl. No.	Taluk	Monthly Rental for the Year 2004-05	Monthly Rentals for 2005-06	Difference	Difference
1	Bangalore Rural	908.56	1068.36	159.79	17.59
2	Bagalkot	199.38	245.59	46.22	23.18
3	Belgaum	622.89	744.03	121.14	19.45
4	Bellary	756.82	862.15	105.33	13.92
5	Bidar	309.69	403.68	93.99	30.35
6	Bijapura	203.63	246.32	42.69	20.96
7	Chamarajnagar	247.19	279.71	32.52	13.16
8	Chickmagalur	520.70	590.51	69.81	13.41
9	Chithradurga	494.05	555.49	61.44	12.44
10	Dakshina Kannada	567.14	607.19	40.05	7.06
11	Davangere	552.82	663.92	111.11	20.10
12	Dharawad	191.03	316.67	125.64	65.77
13	Gadag	144.83	209.76	64.94	44.84
14	Gulbarga	599.28	684.47	85.19	14.22

15	Hassan	591.52	716.83	125.32	21.19
16	Haveri	377.33	420.08	42.76	11.33
17	Kodagu	339.66	374.70	35.04	10.32
18	Kolar	584.52	779.63	195.11	33.38
19	Koppal	278.11	387.10	108.99	39.19
20	Mandya	722.77	858.14	135.37	18.73
21	Mysore	850.95	984.06	133.11	15.64
22	Raichur	295.63	384.64	89.00	30.11
23	Shimoga	624.63	671.99	47.36	7.58
24	Tumkur	762.12	877.17	115.05	15.10
25	Udupi	360.00	418.16	58.16	16.16
26	Uttara Kannada	63.97	77.23	13.26	20.73
	Grand Total	**12169.22**	**14427.60**	**2258.38**	**18.56**

ANNEXURE - 1
DISTRICTWISE AND YEARWISE STATE EXCISE REVENUE

Rs. in Crores

Sl. No.	District	2006-07 (Estimate)
1	Bangalore (U)	1137.07
2	Bangalore (R)	642.89
3	Bagalkote	68.61
4	Belgaum	204.63
5	Bellary	294.97
6	Bidar	67.56
7	Bijapur	30.18
8	C'R' Nagar	32.66
9	Chickmagalur	73.80
10	Chitradurga	66.84

11	D' Kannada	162.10
12	Davanagere	100.80
13	Dharwad	62.54
14	Gadag	24.77
15	Gulbarga	94.68
16	Hassan	83.04
17	Haveri	50.05
18	Kodagu	44.84
19	Kolar	101.41
20	Koppal	45.01
21	Mandya	114.56
22	Mysore	186.49
23	Raichur	49.68
24	Shimoga	80.81
25	Tumkur	107.87
26	Udupi	95.26
27	U' Kannada	36.85
	Total	**4060.33**

1039 (1224) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ಯದ ಅಂಗಡಿಗಳು ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ ನಿಗದಿಪಡಿಸಿದ ವ್ಯವಹಾರದ ಅವಧಿ ಏನು;

ಆ) ಅವರುಗಳು ನಿಯಮಗಳನ್ನು ಪಾಲಿಸುತ್ತಿದ್ದಾರೆಯೇ;

ಇ) ಕಾನೂನು ಉಲ್ಲಂಘಿಸಿದ ಮಾಲೀಕರ ವಿರುದ್ಧ ಎಷ್ಟು ಮೊಕದ್ದಮೆಗಳನ್ನು ದಾಖಲಿಸಲಾಗಿದೆ;

ಈ) ಕಾರ್ಮಿಕರ ಅನುಕೂಲಕ್ಕಾಗಿ ಮದ್ಯದಂಗಡಿಗಳನ್ನು ಬಾರ್ ಅಂಡ್ ರೆಸ್ಟೋರೆಂಟ್ ಮತ್ತು ಪಬ್‌ಗಳನ್ನು ತಿಂಗಳಿನಲ್ಲಿ ಒಂದು ದಿನ ಮುಚ್ಚುವ ನಿಟ್ಟಿನಲ್ಲಿ ಕಾನೂನನ್ನು ಜಾರಿಗೆ ತರುವ ಅಭಿಪ್ರಾಯವು ಸರ್ಕಾರಕ್ಕೆ ಇದೆಯೇ;